CC No. 454/2022
PW-1

ದಿನಾಂಕಃ 26-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ. ಪಿ ಎಮ್ ಜಿ ವಕೀಲರಿಂದ.**

ನಿಪಿ-1 ಕ್ರಾಸ್ ಚೆಕ್ಕ ಎಂದರೆ ಸರಿ. ನಿಪಿ-1 ರ ಮೇಲೆ ಸಿ ಟಿ ಎಸ್ ನಂಬರ ಇಲ್ಲ ಎಂದರೆ ಸರಿ. ಅದರ ಮೇಲೆ ಎಮ್ ಐ ಸಿ ಆರ್ ನಂಬರ ಸಹ ಇಲ್ಲ ಎಂದರೆ ಸರಿ. ನಿಪಿ-1 ಹಳೆಯ ಚೆಕ್ಕು ಎಂದರೆ ಸರಿ. ನಿಪಿ-1 ರ ಮೇಲೆ ಬಾರ ಅಥವಾ scan ಕೋಡ ಇಲ್ಲ ಎಂದರೆ ಸರಿ. ನಿಪಿ-1 ರ ಮೇಲೆ ಪ್ರಬಂಧಕರ ಡಿಜಿಟಲ್ signature ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಹಣ ವರ್ಗಾವಣೆ ಮಾಡುವಾಗ ಮಾತ್ರ ಪ್ರಬಂಧಕರು ಡಿಜಿಟಲ್ signature ಮಾಡುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1 ಚೆಕ್ಕು ಹಾಗೂ ಅದನ್ನು ಬಟವಡೆಗೆ ಸಲ್ಲಿಸಲು ಬರೆಯಲಾದ ಸ್ಲಿಪ್ ಮೇಲೆ ಇರುವ ಬರವಣಿಗೆ ನನ್ನದೇ ಎಂದರೆ ಸರಿ. ಹಸ್ತಾಕ್ಷರ ಸಹ ನನ್ನದೇ ಎಂದರೆ ಸರಿಯಲ್ಲ. ನಿಪಿ-2 ಮೊದಲೇ ಪ್ರಿಂಟ್ ಹಾಕಿದ ಫಾರ್ಮ ಎಂದರೆ ಸರಿ. ಅದರಲ್ಲಿ ಮ್ಯಾನೇಜರ್ ಯಾವುದೇ ವ್ಯವಹರಣೆ ಬರೆದಿಲ್ಲ ಎಂದರೆ ಸರಿ.

2. ನಾನು ಆರೋಪಿಯೊಂದಿಗೆ ಕಾಳಿನ ವ್ಯಾಪಾರ ಮಾಡುತ್ತಿರುವುದಾಗಿ ಹೇಳಿದ್ದು ಅದನ್ನು ಆರೋಪಿ ಈ ಚೆಕ್ಕು ನೀಡಿದ ನಂತರ ನನ್ನೊಂದಿಗಿನ ವ್ಯಾಪಾರ ಬಂದು ಮಾಡಿರುತ್ತಾರೆ. 2012 ರಲ್ಲಿ ಅಂಬುಜಾ ಕಾರ್ಖಾನೆ ಆದ ನಂತರ ಆರೋಪಿ ನನ್ನೊಂದಿಗೆ ವ್ಯವಹಾರ ಬಂದು ಮಾಡಿರುತ್ತಾನೆ ಎಂದರೆ ಸರಿಯಲ್ಲ. ಹಾಗೇ ಅಂಬುಜಾ ಕಾರ್ಖಾನೆ ಕಾರ್ಯನಿರ್ವಹಿಸಲು ಪ್ರಾರಂಭಿಸಿದ ನಂತರ ಆರೋಪಿ ಗೋವಿನ ಜೋಳವನ್ನು ಸದರಿ ಕಾರ್ಖಾನೆಗೆ ಕಳುಹಿಸುತ್ತಿದ್ದರು ಎಂದರೆ ಸರಿಯಲ್ಲ. ಹಾಗೇ ಏಜೆಂಟರಿಂದ ನೇರವಾಗಿ ಕಾರ್ಖಾನೆಯವರು ಗೋವಿನ ಜೋಳ ಖರೀದಿಸುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ರೈತರಿಂದ ನೇರವಾಗಿ ಖರೀದಿಸುತ್ತಿದ್ದರು ಎಂದು ನುಡಿಯುತ್ತಾರೆ. ಹುಬ್ಬಳ್ಳಿಯ ನನ್ನ ಅಂಗಡಿಗೆ ಜಿಎಸ್‌ಟಿ, ಕೆಎಸ್‌ಟಿ ಇಲ್ಲ ಎಂದರೆ ಸಾಕ್ಷಿ ಹುಬ್ಬಳ್ಳಿಯಲ್ಲಿ ನನ್ನದು ಯಾವುದೇ ಅಂಗಡಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಶಿಗ್ಗಾಂವದ ಅಂಗಡಿಗೆ ಕಾನೂನುಬದ್ಧ ಪರವಾನಿಗೆ ಇಲ್ಲ

ಎಂದರೆ ಸರಿಯಲ್ಲ. ನಾನು ನಿಪಿ-1 ನ್ನು ಹುಬ್ಬಳ್ಳಿಯ ಬ್ಯಾಂಕಿಗೆ ಜಮೆಗಾಗಿ ನೀಡಿದ್ದೆ ಎಂದರೆ ಸರಿ. ನಿಪಿ-1 ಚೆಕ್ಕು ಆರೋಪಿತನದು ಅಲ್ಲವೇ ಅಲ್ಲ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಮಂಜುನಾಥ ಬ್ಯಾಂಕಿನಲ್ಲಿ ಕೆಲಸ ಮಾಡುವುದಿಲ್ಲ. ನಾನು ಅವರೊಂದಿಗೆ ಶಾಮೀಲು ಆಗಿ ನಿಪಿ-1 ಚೆಕ್ಕನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.

3. ಆರೋಪಿತ ನೇರವಾಗಿ ಅಂಬುಜಾ ಕಾರ್ಖಾನೆಗೆ ಗೋವಿನ ಜೋಳ ಮಾರಾಟ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆಗ ನಾನು ಆರೋಪಿತನೊಂದಿಗೆ ಮನಸ್ತಾಪ ಮಾಡಿಕೊಂಡು ಅವರು ನನ್ನ ಬಳಿಯೇ ಗೋವಿನ ಜೋಳ ಮಾರಾಟ ಮಾಡಬೇಕು ಎಂಬ ಉದ್ದೇಶ ಹೊಂದಿದ್ದು ಇತ್ತು ಎಂದರೆ ಸರಿಯಲ್ಲ. ಆಗ ನಾನು ಆರೋಪಿತನನ್ನು ಅನೇಕ ಬಾರಿ ನನ್ನ ಅಂಗಡಿಗೆ ಕರೆಯಿಸಿಕೊಂಡು ನಮಗೆ ಗೋವಿನ ಜೋಳ ಮಾರಾಟ ಮಾಡಬೇಕು ಎಂದು ಒತ್ತಾಯ ಮಾಡಿದ್ದು ಇತ್ತು ಎಂದರೆ ಸರಿಯಲ್ಲ. ಹಾಗೇ ನಾನು ಯಾವತ್ತು ಕರೆದು ಕೇಳಿಲ್ಲ. ಆಗ ನಾನು ಆರೋಪಿಯ ಮೇಲೆ ವೈಷಮ್ಯ ಸಾಧಿಸಿ ಈ ಖೊಟ್ಟಿ ಚೆಕ್ಕು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಆರೋಪಿತನ ಬ್ಯಾಂಕಿನ ಖಾತೆಯ ಪುಸ್ತಕ ತೋರಿಸಿ ಅದು ಆರೋಪಿಯದು ಎಂದು ಕೇಳಲಾಗಿ ಸಾಕ್ಷಿ ಒಪ್ಪಿಕೊಳ್ಳುತ್ತಾರೆ. ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿ ನಿಡಿ-2 ಎಸ್‌ಬಿಐ ಬ್ಯಾಂಕಿನದು ಎಂದು ಮುಂದುವರೆದು ನುಡಿಯುತ್ತಾರೆ. ಆರೋಪಿಯ ಖಾತೆ ನಂ.30645682442 ಎಂದರೆ ಸರಿ. ಆರೋಪಿ ದಿನಾಂಕ 15-01-2009 ರಂದು ತನ್ನ ಖಾತೆ ತೆರೆದಿರುತ್ತಾನೆ ಎಂದರೆ ಸರಿ. ನಿಡಿ-2 ರಲ್ಲಿ ಐಎಫ್‌ಎಸ್‌ಸಿ ಕೋಡ, ಎಮ್ ಸಿ ಐ ಆರ್ ಕೋಡ, ಸಿಐಎಫ್ ಕೋಡ, ಕಸ್ಟಮರ್ ಐಡಿ ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ಹೀಗೆ ಸಿಂಡಿಕೇಟ್ ಬ್ಯಾಂಕಿನದು ಸಹ ವಿವರ ಇರುತ್ತದೆ ಎಂದು ಮುಂದುವರೆದು ನುಡಿಯುತ್ತಾರೆ. ಈಗ ನೋಡುತ್ತಿರುವ ಚೆಕ್ಕಿನಲ್ಲಿ ನಿಡಿ-2 ರಲ್ಲಿ ಹೇಳಿದ ವಿವರಗಳು ನಮುಾದು ಇರುತ್ತವೆ ಎಂದರೆ ಸರಿ. ಸದರಿ ಚೆಕ್ಕಿನಲ್ಲಿ ಆರೋಪಿಯ ಹೆಸರು ನಮೂದು ಇರುತ್ತದೆ ಎಂದರೆ ಸರಿ. ಚೆಕ್ಕನ್ನು ನಿಡಿ-3 ಎಂದು ಗುರುತಿಸಲಾಯಿತು. ನಿಡಿ-3 ರಂತೆ ವಿವರಗಳು ನಿಪಿ-1 ರಲ್ಲಿ ಇಲ್ಲ ಎಂದರೆ ಸರಿ. ನಿಪಿ-1 ಸಂಪೂರ್ಣವಾಗಿ ಸೃಷ್ಟಿಸಿದ ಚೆಕ್ಕು ಎಂದರೆ ಸರಿಯಲ್ಲ.

CC No. 454/2022

PW-1

4. ನಾನು ಬಡ್ಡಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ಹಾಗೇ ಬಡ್ಡಿ ಹಣ ವಸೂಲು ಮಾಡುವ ಸಲುವಾಗಿ ಸಾಕಷ್ಟು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಕೆಳ ನ್ಯಾಯಾಲಯದಲ್ಲಿ ಅಸಲು ದಾವಾ ನಂ.01/2016 ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ವಾದ ಪತ್ರದ ದೃಢೀಕೃತ ನಕಲನ್ನು ಗುರುತಿಸುತ್ತಿಲ್ಲ. ಆ ದಾವೆಯಲ್ಲಿ ಪ್ರತಿವಾದಿ ನಾವು ಸಿದ್ಧಲಿಂಗೇಶ್ವರ ಪೈನಾನ್ಸ ನಡೆಸುತ್ತಿದ್ದು ಪ್ರತಿ ದಿವಸ ಬಡ್ಡಿಯ ಹಣ ರೂ.300/- ತುಂಬಬೇಕು ಅಂತಾ ಅವರಿಗೆ ಒತ್ತಾಯ ಮಾಡುತ್ತಿದ್ದೆವು ಎಂದು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನನ್ನ ಚಿಕ್ಕಪ್ಪ ಅಸಲು ದಾವಾ ನಂ.17/2020 ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ವಾದ ಪತ್ರದ ದೃಢೀಕೃತ ನಕಲನ್ನು ಗುರುತಿಸುತ್ತಿಲ್ಲ. ಅದೇ ರೀತಿ ನನ್ನ ಸಹೋದರ ಸರ್ವೇಶ ಸಹ ಒಂದು ದಾವೆ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ವಾದ ಪತ್ರದ ದೃಢೀಕೃತ ನಕಲನ್ನು ಗುರುತಿಸುತ್ತಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.